# ಕಾರ್ಯಕ್ರಮದ ವರದಿ

ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ ಭಾರತೀಯ ಭಾಷಾ ಸಂಸ್ಥಾನ ಮೈಸೂರು, ಪಿ.ಎಲ್.ಎನ್ ಪ್ರಥಮ ದರ್ಜೆ ಕಾಲೇಜು, ಪೂರಿಗಾಲಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ ಇವರ ಸಹಯೋಗದಲ್ಲಿ ಭಾರತೀಯ ಭಾಷಾ ಉತ್ಸವದ ಪ್ರಯುಕ್ತ" ಭಾರತೀಯ ಭಾಷೆಗಳು ಸಾಹಿತ್ಯ ವೈವಿಧ್ಯತೆ ಹಾಗೂ ಐಕ್ಯತೆ" ಎಂಬ ವಿಷಯವನ್ನು ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ದಿನಾಂಕ 08.12.2023ರಂದು ಆಯೋಜಿಸಲಾಗಿತ್ತು .

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಕನ್ನಡದ ಪ್ರಾಧ್ಯಾಪಕ ಪ್ರೊ. ತಿಮ್ಮಯ್ಯನವರು ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡುತ್ತ ಜಗತ್ತಿನಲ್ಲಿ ಸುಮಾರು 12 ಭಾಷಾ ವಂಶವೃಕ್ಷಗಳನ್ನು ವಿಜ್ಞಾನಿಗಳು ಗುರುತು ಮಾಡಿದ್ದಾರೆ. ಅತಿ ದೊಡ್ಡ ಭಾಷಾ ವಂಶವೆಂದರೆ ಇಂಡೋ ಯುರೋಪಿಯನ್ ಭಾಷಾ ವರ್ಗ ಎಂಬ ಮಾಹಿತಿ ನೀಡಿದರು. ಭಾರತ ಬಹುದೊಡ್ಡ ದೇಶ ಹಾಗೂ ವಿಶಾಲ ದೇಶ, ಬಹು ಜನಾಂಗ ಬಹು ಭಾಷೆಗಳಿಂದ, ಬಹು ಧರ್ಮಗಳಿಂದ ಕೂಡಿದೆ. ಅಧಿಕೃತ ಸರ್ವೇಕ್ಷಣೆಯ ಪ್ರಕಾರ ಭಾರತದಲ್ಲಿ ಜನರು 1600ಕ್ಕೂ ಹೆಚ್ಚು ಭಾಷೆಗಳನ್ನು ಮಾತಾನಾಡುತ್ತಾರೆ. ಈ ಭಾಷಾ ಮಾಧ್ಯಮ ಪ್ರಚಲಿತತೆಗೆ ಬರುವ ಮುಂಚೆ ಮಾನವರೂ ಕೂಡ ಪ್ರಾಣಿಗಳಂತೆ ಸಂಜ್ಞೆ ಸೂಚನೆಗಳ ಮೂಲಕ ಮಾತಾನಾಡುತ್ತಿದ್ದರು. ನಂತರ ಆತ ತನ್ನ ವಿಶೇಷ ಜ್ಞಾನದಿಂದಾಗಿ ಭಾಷಾ ಲಿಪಿಗಳನ್ನು ರೂಪಿಸಿಕೊಂಡನು. ನಂತರ ಇವುಗಳು ಕವಲೊಡೆದು ಸಾವಿರಾರು ಲಿಪಿಗಳಾಗಿ ಬೆಳೆದುಬಂದವು.

ಇಂಡೋ ಆರ್ಯನ್ ಭಾಷಾ ಪರಿವಾರವನ್ನು ಕುರಿತು ಅವರು ವಿವರವಾದ ಮಾಹಿತಿಯನ್ನು ನೀಡಿದರು. ಭಾರತೀಯ ಭಾಷೆಗಳನ್ನು ಕುರಿತು ಮಾತಾನಾಡುತ್ತ ಸಂಸ್ಕೃತ ಅನೇಕ ದೇಶಿ ಭಾಷೆಗಳ ಮೇಲೆ ತನ್ನ ಪ್ರಭಾವ ಬೀರಿದೆ ಎಂಬುದನ್ನು ಗುರುತಿಸಿ ಹೇಳಿದರು. ಆರ್ಯನ್ ಭಾಷೆಗಳಲ್ಲಿ ಸಮೃದ್ಧಿಯಿದೆ, ಸತ್ವವಿದೆ ಎಂದು ರಾಮಾಯಣ ಮಹಾಭಾರತಗಳ ವಿಶಿಷ್ಟತೆಯನ್ನು ವಿವರಿಸಿದರು. ಪ್ರಪಂಚದ ಹಲವು ಪುರಾಣಗಳು ಬೇರೆ ಬೇರೆ ಭಾಷೆಗಳಲ್ಲಿ ರಚಿತವಾಗಿವೆ. ಈ ಪುರಾಣಗಳನ್ನು ಸಾಂಕೇತಿಕ ಅರ್ಥದಲ್ಲಿ ವಿವರಿಸಿಕೊಳ್ಳದಿದ್ದರೆ ಆಭಾಸವೆನಿಸುತ್ತದೆ ಎಂಬುದಾಗಿ ತಿಳಿಸಿದರು. ಹಿಂದಿ ಕೂಡ ಸಮೃದ್ಧ ಭಾಷೆ ಎಂಬುದಾಗಿ ಅಭಿಪ್ರಾಯ ವ್ಯಕ್ತಪಡಿಸಿದರು. ಕನ್ನಡ ಭಾಷೆಗೆ ಪ್ರತ್ಯೇಕ ಅಸ್ತಿತ್ವವಿದೆ, ಅಸ್ಮಿತೆ ಇದೆ ಎಂಬುದಾಗಿ ತಿಳಿಸಿದರು. ಹಲವು ಭಾಷೆಗಳಿಂದ ಪದಗಳನ್ನು ಇಂಗ್ಲಿಷ್ ಭಾಷೆ ಪಡೆದುಕೊಂಡುದರಿಂದ ಅದು ಸಮೃದ್ಧವಾಗಿ ಬೆಳೆಯಲು ಸಾಧ್ಯವಾಯಿತು ಎಂದು ವಿವರಿಸಿದರು.

ಮಹಾಕವಿ ಸುಬ್ರಹ್ಮಣ್ಯ ಭಾರತಿ ಇವರ ಜನ್ಮದಿನದ ಪ್ರಯುಕ್ತವಾಗಿ ಭಾಷಾ ಉತ್ಸವವನ್ನು ಭಾರತೀಯ ಭಾಷಾ ಸಂಸ್ಥಾನ ಹಮ್ಮಿಕೊಂಡಿರುವುದು ಬಹಳ ಶ್ಲಾಘನೀಯ ಅಂಶವೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ರಾಜಣ್ಣ ಬಿ., ಕಾಲೇಜಿನ ಟ್ರಸ್ಟಿಗಳಾದ ರಾಘವೇಂದ್ರ ಮತ್ತು ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಡಾ. ಶಶಿಧರ ಸಿ.ಎ., ಸೀನಿಯರ್ ಫೆಲೋ ಭಾಗವಹಿಸಿದ್ದರು.

18/12/22

**(ಪ್ರೊ. ಎನ್.ಎಂ. ತಳವಾರ್)**

ಯೋಜನಾ ನಿರ್ದೇಶಕರು